ಎಲ್ಲರೂ ಒಟ್ಟಾಗಿ ಸೇರುತ್ತಾರೆ. ವಿಶೇಷ ಅಡುಗೆ ಮಾಡಿ ಸವಿಯುತ್ತಾರೆ. ಕಾನೂನು ಕಟ್ಟಳೆಗಳ ಯಾವುದೇ ಕಟ್ಟುಪಾಡಿಗೆ ಒಳಗಾಗದೆ, ಪಿತ್ರಾರ್ಜಿತ ಆಸ್ತಿ ಹಂಚಿಕೆಯಲ್ಲಿ ಯಾವುದೇ ತಕರಾರು ಇಲ್ಲದ ಕಾರಣ, ಈ ಕುಟುಂಬ ನೆಮ್ಮದಿಯ ಜೀವನ ನಡೆಸುತ್ತಿದೆ. ಸಹಕಾರ, ಸಹಬಾಳ್ವೆ, ಸಮರಸವೇ ಜೀವನ ಅಲ್ಲವೇ?

### ಸಹವಾರಸುದಾರರಿಗೂ ಹಕ್ಕಿದೆ

ಚನ್ನಪಟ್ಟಣದ ಮಂಚೇಗೌಡರಿಗೆ ಎರಡು ಗಂಡು, ಎರಡು ಹೆಣ್ಣು ಸೇರಿ ನಾಲ್ಕು ಮಕ್ಕಳು. ಎಲ್ಲರಿಗೂ ಮದುವೆ ಮಾಡಿದ ಗೌಡರಿಗೆ ಜೀವನದ ಇಳಿವಯಸ್ಸಿನಲ್ಲಿ ಪತ್ನಿ ಅಸುನೀಗಿದರು. ಹಿರಿಯ ಮಗ ಅಪ್ಪನನ್ನು ಚೆನ್ನಾಗಿ ನೋಡಿಕೊಂಡರು. ತಾವು ಕಷ್ಟಪಟ್ಟು ಸಂಪಾದಿಸಿದ ಆಸ್ತಿಯನ್ನು ಯಾರಿಗೂ ವಿಭಜನೆ ಮಾಡದೆ, ವಿಲ್ ಅನ್ನೂ ಬರೆಯದೆಯೇ ಇಹಲೋಕ ತ್ಯಜಿಸಿದರು.

ಮಕ್ಕಳೆಲ್ಲ ಅನ್ಯೋನ್ಯವಾಗಿಯೇ ಇದ್ದರು. ಕೂಡುಕುಟುಂಬದ ಆಸ್ತಿ ಹಾಗೆಯೇ ಇತ್ತು. ವಿಭಜನೆ ಮಾಡಿಕೊಳ್ಳಬೇಕು ಎಂಬ ಯೋಚನೆ ಯಾವ ಮಕ್ಕಳಲ್ಲೂ ಇರಲಿಲ್ಲ. ಹೀಗಾಗಿ ಹಿರಿಯ ಮಗನೇ ಸಮಸ್ತ ಜವಾಬ್ದಾರಿ ಹೊತ್ತುಕೊಂಡರು. ಅಷ್ಟೊತ್ತಿಗಾಗಲೇ ಮೊಮ್ಮಕ್ಕಳು ವಯಸ್ಸಿಗೆ ಬಂದರು. ಅಜ್ಜ–ಅಜ್ಜಿ ಮಾಡಿದ ಆಸ್ತಿಯಲ್ಲಿ ನಮಗೂ ಪಾಲು ಬೇಕು ಎಂದು ಕೇಳತೊಡಗಿದರು. ಹಿರಿಯರಿಂದ ವಿರೋಧ ಬಂದಾಗ ಹಾಲು–ಜೇನಿನಂತಿದ್ದ ಕುಟುಂಬದೊಳಗೆ ಒಡಕಿನ ಬಿರುಗಾಳಿ ಬೀಸಲಾರಂಭಿಸಿತು. ಪಿತ್ರಾರ್ಜಿತ ಆಸ್ತಿ ಪಡೆಯಲು ಮೊಮ್ಮಕ್ಕಳು ಹಾದಿಬೀದಿ ಜಗಳ ಮಾಡಿಕೊಂಡ ಕಾರಣ ಕೂಡುಕುಟುಂಬದ ಆಸ್ತಿ ಹೋಳು ಹೋಳಾಯಿತು. ಹೀಗೆ ಕೂಡು ಕುಟುಂಬ ವಿಭಾಗವಾಗಲು ಮಕ್ಕಳೇ ಆಗಬೇಕಿಲ್ಲ. ಸಮಾನ ಆಸ್ತಿಹಕ್ಕು ಪಡೆಯುವ ಮಕ್ಕಳ ಜೊತೆಗೆ ಎಲ್ಲ ಮೊಮ್ಮಕ್ಕಳೂ ಸಹವಾರಸುದಾರರೇ ಆಗಿರುತ್ತಾರೆ.

### ಆಸ್ತಿ, ನಿರ್ಲಕ್ಷಿಸಿದರೆ ನಾಸ್ತಿ!

ಈ ವಾಸ್ತವ ಘಟನೆಯೊಂದನ್ನು ಗಮನಿಸಿ. ಅದು ಗ್ರಾಮೀಣ ಪ್ರದೇಶದ ಅವಿಭಕ್ತ ಕುಟುಂಬ. ವ್ಯವಸಾಯವೇ ಆ ಕುಟುಂಬದ ಜೀವನಾಧಾರ. ಕುಟುಂಬದ ಎಲ್ಲ ಸದಸ್ಯರಿಗೂ ಅವರ ಭೂಮಿಯೆಂದರೆ ಅಪಾರ ಗೌರವ,

**ತಂದೆಯ ಸ್ವಯಾರ್ಜಿತ ಆಸ್ತಿಯಲ್ಲಿ ತಂದೆ ಜೀವಂತ ಇದ್ದಾಗಲೇ ಮಗ, ಮಗಳ ಅಥವಾ ಕುಟುಂಬದ ಇತರ ಸದಸ್ಯರಿಗೆ ಪಾಲು ಕೇಳಲು ಬರುವುದಿಲ್ಲ. ಗಂಡು ಮತ್ತು ಹೆಣ್ಣು ಸಮಾನವಾಗಿದ್ದು, ಆದರಂತೆ ಮಕ್ಕಳಿಗೆ ಆಸ್ತಿಯಲ್ಲಿಯೂ ಸಮಪಾಲು ಇರುತ್ತದೆ.**

ಸಂದರ್ಶನ

# ಪಿತ್ರಾರ್ಜಿತ ಆಸ್ತಿ; ಮಕ್ಕಳ ಹಕ್ಕು, ಆದ್ಯತೆ



ಕೆ.ಎಸ್. ಗೋಪಿನಾಥ್,
ಹಿರಿಯ ನ್ಯಾಯವಾದಿ, ಬೆಂಗಳೂರು

**◆ ಮದುವೆಯಾದ ಹೆಣ್ಣು ಮಕ್ಕಳೂ ತಂದೆಯ ಆಸ್ತಿಯಲ್ಲಿ ಪಾಲು ಪಡೆಯಲು ಅರ್ಹರೇ?**

ಖಂಡಿತವಾಗಿಯೂ ಅರ್ಹರು. 2005ರ ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಕಾಯ್ದೆಯಡಿಯಲ್ಲಿ ಕೇಂದ್ರ ಸರಕಾರ ಹಿಂದೂ ಕುಟುಂಬದಲ್ಲಿ ಗಂಡು ಮಕ್ಕಳಂತೆಯೇ ಹೆಣ್ಣು ಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಸಮ ಪಾಲು ಪಡೆಯುವ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಈ ಕಾಯ್ದೆಯಡಿಯಲ್ಲಿ 2005ರ ನಂತರ ಮದುವೆಯಾದ ಎಲ್ಲ ಹೆಣ್ಣು ಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಂತೆಯೇ ಪಾಲನ್ನು ಪಡೆಯುವ ಹಕ್ಕು ಇದೆ.

**◆ ಪಿತ್ರಾರ್ಜಿತ ಮತ್ತು ತಂದೆಯ ಸ್ವಯಾರ್ಜಿತ ಆಸ್ತಿಗಳು ಅವರ ಮರಣಾನಂತರ ಕಾನೂನು ಪ್ರಕಾರ ವಿಭಾಗವಾಗುವುದು ಹೇಗೆ?**

ಸಾಮಾನ್ಯವಾಗಿ ಮೂರು ತಲೆಮಾರಿನ ಆಸ್ತಿ ಪಿತ್ರಾರ್ಜಿತ ಎಂದು ಕರೆಯಲ್ಪಡುತ್ತದೆ. ಒಂದು ವೇಳೆ ತಂದೆ ತನ್ನ ಸ್ವಪರಿಶ್ರಮದಿಂದ ಆಸ್ತಿಯನ್ನು ಸಂಪಾದಿಸಿದ್ದರೆ ಅದು ಅವರ ಸ್ವಯಾರ್ಜಿತ ಆಸ್ತಿಯಾಗುತ್ತದೆ. ಅದನ್ನು ಅವರು ತಮ್ಮ ಸ್ವಂತ ದುಡಿಮೆಯ ಹಣವನ್ನು ವಿನಿಯೋಗಿಸಿ ಸಂಪಾದಿಸಿರಬೇಕು ಮತ್ತು ಪಿತ್ರಾರ್ಜಿತ ಆಸ್ತಿಯಿಂದ ಬಂದ ಹಣವನ್ನು ಬಳಸಿರಬಾರದು. ಇಂತಹ ಆಸ್ತಿಯನ್ನು ಆತ ತನ್ನ ಹೆಣ್ಣು ಅಥವಾ ಗಂಡು ಮಕ್ಕಳಿಗಾಗಲೀ ಅಥವಾ ತಾವು ಬಯಸುವ ಯಾವುದೇ ವ್ಯಕ್ತಿಗಳಿಗೆ ನೀಡಲು ಸ್ವತಂತ್ರರಿರುತ್ತಾರೆ. ಒಂದೊಮ್ಮೆ ಆತ ಜೀವಿತಾವಧಿಯಲ್ಲಿ ವಿಲ್ (ಮರಣಪತ್ರ) ಮಾಡದೆ ತೀರಿಕೊಂಡರೆ ಆ ಆಸ್ತಿಯೂ ಅವರ ವಾರಸುದಾರರಿಗೆ ಸಮನಾಗಿ ಹಂಚಲ್ಪಡುತ್ತದೆ.

**◆ ತಂದೆಯ ಆಸ್ತಿಯಲ್ಲಿ ಮಕ್ಕಳ ಹಕ್ಕುಗಳು ಏನು?**

ತಂದೆಯ ಆಸ್ತಿಯಲ್ಲಿ, ತಂದೆಯ ಸ್ವಯಾರ್ಜಿತ ಆಸ್ತಿಯನ್ನು ಸಮ ಭಾಗ ಕೊಡಬಹುದು ಅಥವಾ ಅವರಿಗೆ ಇಷ್ಟ ಬಂದವರಿಗೆ ಅವರು ಕೊಡಬಹುದು. ಇದು ಅವರ ಮಕ್ಕಳೇ ಆಗಿರಬಹುದು ಅಥವಾ ಬೇರೆಯವರೇ ಆಗಿರಬಹುದು. ಇದರ ಸಂಪೂರ್ಣ ನಿರ್ಧಾರ ತಂದೆಯದೇ ಆಗಿರುತ್ತದೆ. ಆದರೆ, ತಂದೆಗೆ ಪಿತ್ರಾರ್ಜಿತವಾಗಿಯೂ ಆಸ್ತಿ ಬಂದಿದ್ದಲ್ಲಿ ಆ ಆಸ್ತಿಯು ತಂದೆ ತಾಯಿಗೂ ಮತ್ತು ಮಕ್ಕಳಿಗೂ ಸಮಾನವಾಗಿ ಭಾಗ ಆಗುತ್ತದೆ. ಯಾವುದೇ ಆಸ್ತಿಯ ಬೇಕು ಅಥವಾ ಬೇಡ ಅಥವಾ ಸಮವಾಗಿಯೇ ತೆಗೆದುಕೊಳ್ಳಬೇಕು ಇತ್ಯಾದಿಗಳು ಅವರವರ ಕುಟುಂಬ ಸದಸ್ಯರ ನಿರ್ಧಾರ ಆಗಿರುತ್ತದೆ.

**◆ ತಂದೆ ತಾಯಿಯ ಹಿರಿಯ ಮಗ ಹೆತ್ತವರ ಕಾಲಾನಂತರ ಆಸ್ತಿಯ ಬಗ್ಗೆ ಸುಳ್ಳು ಮಾಹಿತಿ ನೀಡಿ ತನ್ನ ಹೆಸರಿಗೆ ಮಂಜೂರು ಮಾಡಿಸಿಕೊಂಡ ಅನೇಕ ಉದಾಹರಣೆಗಳಿವೆ. ಇದಕ್ಕೆ ಪರಿಹಾರವೇನು?**

1970ರ ದಶಕದಲ್ಲಿ ಸರ್ಕಾರ ಗೇಣಿ ಕಾಯ್ದೆಯನ್ನು ರದ್ದುಪಡಿಸಿ 'ಉಳುವವನೇ ಒಡೆಯ' ಎಂಬ ಕಾನೂನು ತರುತ್ತದೆ. ಇದರ ಅಡಿಯಲ್ಲಿ ತಂದೆಯೇ ಸ್ವಾಧೀನದಾರ ಮತ್ತು ಸಾಗುವಳಿದಾರ ಎಂದು ಕಂದಾಯ ದಾಖಲೆಗಳಲ್ಲಿ ದಾಖಲಾಗಿರುತ್ತದೆ. ಹಲವಾರು ವರ್ಷಗಳ ನಂತರ ಅವರ ಮಗನೊಬ್ಬ ಈ ವಿಷಯ ಮುಚ್ಚಿಟ್ಟು ತಾನೇ ಸ್ವಾಧೀನದಾರ ಮತ್ತು ಸಾಗುವಳಿದಾರ ಎಂದು ಸರ್ಕಾರಕ್ಕೆ ತಪ್ಪು, ಸುಳ್ಳು ಮಾಹಿತಿ ಕೊಟ್ಟು ತನ್ನ ಹೆಸರಿಗೆ ಮಂಜೂರು ಮಾಡಿಸಿಕೊಂಡರೆ ಅದು ಅಪರಾಧ. ಹೀಗೆ ಮಾಡಿದಲ್ಲಿ ಈ ಮಂಜೂರಾತಿಯನ್ನು ಪುನಃ ಪರಾಮರ್ಶಿಸುವ, ಹಿಂತೆಗೆದುಕೊಳ್ಳುವ ಅಧಿಕಾರ ಸರ್ಕಾರಕ್ಕಿದೆ. ಇತರ ವಾರಸುದಾರರು ಈ ಮಂಜೂರಿಯನ್ನು ಪ್ರಶ್ನಿಸಿ ಅಸಿಸ್ಟೆಂಟ್ ಕಮಿಷನರರ ನ್ಯಾಯಾಲಯದಲ್ಲಿ ದೂರು ಸಲ್ಲಿಸಬಹುದು. ಜಿಲ್ಲಾಧಿಕಾರಿಗಳ ಕಂದಾಯ ನ್ಯಾಯಾಲಯದಲ್ಲಿ ದಾವೆ ಹೂಡಬಹುದು. ಅಲ್ಲಿಯೂ ನ್ಯಾಯ ಸಿಗದಿದ್ದರೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ (ಹೈಕೋರ್ಟ್) ಅರ್ಜಿ ಸಲ್ಲಿಸಬಹುದು.

**◆ ಈ ರೀತಿಯ ಮೋಸ ವಂಚನೆಗಳು ನಡೆದು ಹತ್ತಾರು ವರ್ಷಗಳೇ ಕಳೆದು ಬೆಳಕಿಗೆ ಬರುವುದು. ಬಹಳ ತಡವಾದರೆ ನಂತರದಲ್ಲಿ ನ್ಯಾಯಾಲಯದ ಮೊರೆ ಹೋಗಲು ಹಾಗೂ ಈ ರೀತಿಯ ವಿಳಂಬಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೇ?**

ಖಂಡಿತ ಇದೆ. ವಂಚನೆ ನಡೆದು ಎಷ್ಟೇ ವರ್ಷಗಳಾಗಿದ್ದರೂ ಅದು ಬೆಳಕಿಗೆ ಬಂದ ದಿನಾಂಕದಿಂದ ಮೂರು ವರ್ಷಗಳವರೆಗೆ ನ್ಯಾಯ ಪಡೆಯಲು ಅವಕಾಶವಿರುತ್ತದೆ. ಆದ್ದರಿಂದ ಕಾಲಮಿತಿ ನಿಯಮ ಕಾಯಿದೆಯಿಂದ ಇದಕ್ಕೆ ತೊಂದರೆ ಇಲ್ಲ. ■